**ಕವಿಯ ವ್ಯಕ್ತಿತ್ವದಲ್ಲಿ ನಮಗೆ ಒಗ್ಗದ ಅಂಶಗಳನ್ನು ಒತ್ತಟ್ಟಿಗಿರಿಸಿ, ನಾವು ಕವಿಯ ಕಾವ್ಯದೆಡೆಗೆ ತಿರುಗಬೇಕಾಗಿದೆ. ಸಿದ್ಧಲಿಂಗಯ್ಯನವರ ಒಟ್ಟು ಬರವಣಿಗೆಯಲ್ಲಿ ಕನ್ನಡ ಸಾಂಸ್ಕೃತಿಕ–ಸಾಮಾಜಿಕ ಲೋಕಕ್ಕೆ, ಹೊಸ ತಲೆಮಾರುಗಳಿಗೆ ಬೇಕಾದದ್ದೇನು ಎಂದು ಹುಡುಕಿ ಸ್ವೀಕರಿಸುವುದು ಕನ್ನಡ ಕಾವ್ಯ ಹಾಗೂ ಕರ್ನಾಟಕ ಸಂಸ್ಕೃತಿಗಳ ತಕ್ಷಣದ ಜರೂರು ಕೂಡ ಆಗಿದೆ.**



ಇದರಿಂದ ನಿಜಕ್ಕೂ ಕುಸಿದಂತಿತ್ತು. ಆ ಕಾಲದಲ್ಲಿ, 2020ರ ಲಾಕ್‌ಡೌನ್ ಸಂದರ್ಭದಲ್ಲಿ ನಗರಗಳಿಂದ ಊರಿಗೆ ಮರಳುತ್ತಿದ್ದ ನೊಂದ ಕಾರ್ಮಿಕರ ವಿಡಿಯೊ ತುಣುಕುಗಳ ಜೊತೆಗೆ 'ಹಸಿವಿನಿಂದ ಸತ್ತೋರು, ಸೈಜುಗಲ್ಲು ಹೊತ್ತೋರು' ಸಾಲುಗಳು ಸಾಮಾಜಿಕ ಜಾಲತಾಣಗಳಲ್ಲಿ ಕೇಳಿಬರತೊಡಗಿದವು; ತಮ್ಮ ಕಾವ್ಯದ ಕಾಳಜಿಗಳು ಮುಂದೆಯೂ ತಮ್ಮ ಕೈ ಹಿಡಿಯಬಹುದೆಂಬ ಆಶಾಕಿರಣ ಆಗ ಅವರಲ್ಲಿ ಕಾಣಿಸಿಕೊಂಡಂತಿತ್ತು. ಅವರ 'ಸಾವಿರಾರು ನದಿಗಳು', 'ಕಪ್ಪು ಕಾಡಿನ ಹಾಡು', 'ಕುದಿವ ನೀಲಿಯ ಕಡಲು', 'ಊರು ಸಾಗರವಾಗಿ' ಸಂಕಲನಗಳಲ್ಲಿ ನದಿ, ಕಡಲು, ಸಾಗರ ಹಾಗೂ ಕಾಡಿನ ಪ್ರತಿಮೆಗಳು ಅವರ ಕಾವ್ಯ ಕೇಂದ್ರದ ನಿರಂತರತೆಯನ್ನು ಸೂಚಿಸುತ್ತವೆ; ಅವರ ಕಾವ್ಯದ ದುರ್ಬಲ ಭಾಗಗಳ ಜೊತೆಗೇ ಕಾವ್ಯದ ಮೂಲ ಕಾಳಜಿ ಹಾಗೂ ಕಾವ್ಯತತ್ತ್ವ ಕೊನೆಯವರೆಗೂ ಹೆಚ್ಚುಕಡಿಮೆ ಒಂದೇ ಆಗಿದೆ. ಆದರೆ, ಅವರ 'ಊರು ಸಾಗರವಾಗಿ' ಎಂಬ ಕೊನೆಯ ಸಂಕಲನದ ಕೊನೆಯ ಪದ್ಯ 'ಕೊಳಲು ಮತ್ತು ಖಡ್ಗ'ದಲ್ಲಿ ಖಡ್ಗದಿಂದ ಕೊಳಲಿಗೆ ಹೊರಳುವ ಸರಳ ಕಾತರವಿತ್ತು. 'ಖಡ್ಗವಾಗಲಿ ಕಾವ್ಯ' ಎಂಬ ಆಶಯಕ್ಕೆ ಸ್ಫೂರ್ತಿಯಾಗಿದ್ದ ಕವಿಯ ಕಾವ್ಯತತ್ತ್ವ ಬೇರೊಂದು ದಿಕ್ಕಿಗೆ ಹೊರಳಲು ಬಯಸಿತ್ತೆ? ನಿರ್ದಯ ಕಾಲ ಅವರ ಕಾವ್ಯದ ಈ ದಿಕ್ಕಿಗೆ ಕಾಲಾವಕಾಶ ಕೊಡಲು ಸಿದ್ಧವಿರಲಿಲ್ಲ...

## ಮತ್ತೆ ಆರಂಭದ ಕಾಳಜಿಗಳ ಕಡೆಗೆ...

ಈ ಬರಹ ಮುಗಿಸುತ್ತಿರುವಾಗ, ಕಳೆದ ಏಪ್ರಿಲ್ 15ರ ಬೆಳಗ್ಗೆ ಅವರು ಫೋನಿನಲ್ಲಿ ಆಡಿದ ಮಾತಿನಲ್ಲಿದ್ದ ದಲಿತ ಚಳವಳಿ ಕುರಿತ ನಿಜವಾದ ಕಾಳಜಿ ನೆನಪಾಗುತ್ತದೆ. ಅಂಬೇಡ್ಕರ್ ದಿನಾಚರಣೆಯ ದಿನ ದಲಿತ ಸಂಘಟನೆಗಳ ನಾಯಕರು ದಲಿತ ಚಳವಳಿಯ ಏಕತೆಯ ಚಿಂತನೆ ನಡೆಸಿದ್ದರು. ಈ ಏಕತೆಯ ಮಹತ್ವ ಕುರಿತ ನನ್ನ ಬರಹವೊಂದು 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿತ್ತು. ಅದನ್ನು ಓದಿದ್ದ ಸಿದ್ಧಲಿಂಗಯ್ಯನವರು ಈ ಏಕತೆ ಈ ಕಾಲದ ಅನಿವಾರ್ಯ ಅಗತ್ಯ ಎಂಬುದನ್ನು ಕುರಿತು ಮಾತಾಡಿದ್ದರ ಮಹತ್ವ ಇನ್ನಷ್ಟು ಸ್ಪಷ್ಟವಾಗುತ್ತಿದೆ. ಒಂದು ಕಾಲಕ್ಕೆ ದಲಿತ ಚಳವಳಿಗೆ ಭದ್ರ ಬುನಾದಿ ಒದಗಿಸಿದ್ದ ಕವಿಯ ಆ ಮಾತು ಈಗ ಹೊಸ ಧ್ವನಿ ಪಡೆಯಬೇಕಾಗಿದೆ. ಕವಿಯ ಕಾವ್ಯದ ಮೂಲ ಉಸಿರಾದ ದಲಿತ ಚಳವಳಿಯ ಏಕತೆಯನ್ನು ಸಾಧಿಸುವುದೇ ಜನಪರ ಚಳವಳಿಗಳು ತಮ್ಮ ಪ್ರೀತಿಯ ಕವಿಗೆ ಸಲ್ಲಿಸಬಹುದಾದ ಅರ್ಥಪೂರ್ಣ ಶ್ರದ್ಧಾಂಜಲಿ ಎಂಬುದು